

# ಮೋಹಕ ಮಲ್ಟಿಕಲರ್ ಹರಳಿನಾಭರಣ

**ಉಡುಪಿಗೆ ಮ್ಯಾಚಿಂಗ್ ಮಾಡಿಕೊಳ್ಳಲು ಬಣ್ಣಬಣ್ಣದ ಹರಳುಗಳ ಒಡವೆ ಅತ್ಯಂತ ಸೂಕ್ತ. ಮಲ್ಟಿಕಲರ್ ಹರಳಿನ ಒಡವೆ ಈಗಿನ ಫ್ಯಾಷನ್ ಟ್ರೆಂಡ್. ಮದುವೆ, ಪಾರ್ಟಿಗಳಂಥ ಅದ್ದೂರಿ ಸಮಾರಂಭಗಳಿಗೆ ಹರಳಿನ ಆಭರಣ ಗ್ರ್ಯಾಂಡ್ ಲುಕ್ ಕೊಡುತ್ತದೆ.**

■ **ಕೃಷ್ಣವೇಣಿ ಪ್ರಸಾದ್ ಮುಳಿಯ**

ರೇಷ್ಮೆ ಸೀರೆ, ಲಂಗ ದಾವಣಿ, ಲೆಹೆಂಗಾ... ಹೀಗೆ ಯಾವುದೇ ಮಾದರಿಯ ಗ್ರ್ಯಾಂಡ್ ಉಡುಗೆ ಯಾವ ಬಣ್ಣದಲ್ಲಿದ್ದರೂ ಅದಕ್ಕೆ ಅತ್ಯಂತ ಸೂಕ್ತವಾಗಿ ಮ್ಯಾಚಿಂಗ್ ಆಗುವಂಥ ಮಲ್ಟಿಕಲರ್ ಒಡವೆ ಇದೀಗ ಫ್ಯಾಷನ್ ಟ್ರೆಂಡ್ ಎನಿಸಿದೆ. ಹಸುರು, ಬಿಳಿ, ರೂಬಿ, ನೀಲ... ಹೀಗೆ ಎಲ್ಲ ವರ್ಣಗಳ ಹರಳುಗಳು ಒಂದೇ ಒಡವೆಯಲ್ಲಿ ಅಡಕವಾಗಿದ್ದು, ಮಿಕ್ಸ್ ಅಂಡ್ ಮ್ಯಾಚ್ ಮಾಡಿಕೊಳ್ಳಲೂ ಸಹಕಾರಿಯಾಗಿದೆ. ಕಡುಬಣ್ಣದ ಸೀರೆಯನ್ನೋ, ಲೆಹೆಂಗಾವನ್ನೋ ತೊಟ್ಟಾಗ ಯಾವ ಬಣ್ಣದ ಒಡವೆ ಹಾಕಿಕೊಳ್ಳಲಿ ಎಂಬ ಪೇಚಾಟವನ್ನು ಈ ಮಲ್ಟಿಕಲರ್ ಒಡವೆ ತಪ್ಪಿಸುತ್ತದೆ.

ಮಲ್ಟಿ ಕಲರ್ ಹರಳು ಆಭರಣ ಟ್ರೆಂಡಿಂಗ್‌ನಲ್ಲಿದೆ. ಉಡುಪಿಗೆ ಮ್ಯಾಚ್ ಮಾಡಿಕೊಳ್ಳಲು, ಅಂದ ಹೆಚ್ಚಿಸಲು, ಹೊಳಪುಳ್ಳ ಬಣ್ಣಬಣ್ಣದ ಹರಳುಗಳ ಒಡವೆ ಸಖತ್ ಲುಕ್ ಕೊಡುತ್ತದೆ. ನವರತ್ನ ಹರಳುಗಳು ಎಲ್ಲ ಬಣ್ಣಗಳ ಉಡುಪಿಗೂ ಮ್ಯಾಚ್ ಆಗುವುದಲ್ಲದೆ ಇಂಥ ಆಭರಣಗಳನ್ನು ಮಿಕ್ಸ್ ಅಂಡ್ ಮ್ಯಾಚ್ ಮಾಡಿಯೂ ತೊಟ್ಟುಕೊಳ್ಳಬಹುದು.

ಬಣ್ಣ ಬಣ್ಣದ ಯಾವುದೇ ಬಟ್ಟೆ ಆಗಲಿ, ತಲೆಯ ಬ್ಯಾಂಡ್ ಆಗಲಿ, ಬಳೆಗಳಾಗಲಿ, ಹೆಣ್ಮಕ್ಕಳು ಧರಿಸುವ ಯಾವುದೇ ವಸ್ತುಗಳಾಗಲಿ ಕಣ್ಣಿಗೆ ಅಂದ. ಪ್ಲೈನ್ ಉಡುಗೆಗಳಿಗೂ